# ದೂರದೃಷ್ಟಿ

ಉಪನಿಷತ್ತಿನಲ್ಲಿ ಮಾತೊಂದಿದೆ: 'ಯಥಾ ದೃಷ್ಟಿಃ ತಥಾ ಸೃಷ್ಟಿಃ' ಎಂದು. ದೃಷ್ಟಿಗೂ ಸೃಷ್ಟಿಗೂ ಸಂಬಂಧ ಉಂಟು. ದೇಶದ ಯಜಮಾನ ದೇಶದ ಸಮಗ್ರತೆ ದೃಷ್ಟಿಯಿಂದ ನೋಡಬೇಕು. ಅವನು ನೋಡುವ ದೃಷ್ಟಿಕೋನ ಸಂಕೋಚದಿಂದ ಕೂಡಿರಬಾರದು. ಎಲ್ಲ ಅಧಿಕಾರಸ್ಥರೂ 'ದೂರದೃಷ್ಟಿ' ಹೊಂದಿರಬೇಕು. ಆಗ ದೇಶ ಕ್ಷೇಮವಾಗಿರುತ್ತದೆ. ಕೆಲವರು ಸಂಕುಚಿತ ಭಾವದಿಂದ ನೋಡುತ್ತಾರೆ. ಮತ್ತೂ ಕೆಲವರು ಸಂಶಯಭಾವದಿಂದ ನೋಡುತ್ತಾರೆ. ಹೀಗೆ ವ್ಯತ್ಯಾಸ ಆಗುವುದಕ್ಕೆ ಕಾರಣವೇನೆಂದು ವಿಚಾರಿಸಿದಾಗ 'ಪ್ರತೀಕ್ಷಾ ಸ್ವಭಾವ'ವೇ ಇದಕ್ಕೆಲ್ಲ ಮೂಲಕಾರಣ. ಸ್ವಭಾವವು ಹೇಗಿರುತ್ತೋ ಅವನು ತೆಗೆದುಕೊಳ್ಳುವ ನಿರ್ಧಾರಗಳು ಹಾಗಿರುತ್ತವೆ. ಪಾರದರ್ಶಕದಂಥ ಮನಸ್ಸನ್ನು ಹೊಂದಿರುವ ಸತ್ಪುರುಷರು ಮಾತ್ರ 'ದೂರದೃಷ್ಟಿ' ಹೊಂದಿರುತ್ತಾರೆ. ಯೋಗಿ, ಸಂತ ಮೊದಲಾದವರು 'ಆತ್ಮಭಾವ'ದಲ್ಲಿರುತ್ತಾರೆ. ಇಂಥವರಿಗೆ ಯಾವುದೂ ಮೇಲಲ್ಲ; ಯಾವುದೂ ಕೀಳಲ್ಲ. ಇಂಥವರು 'ಸುಖೇದುಃಖೇ ಸಮೇಕೃತ್ವಾ' ಭಾವವುಳ್ಳವರು. ಇವರು 'ಲೋಕಹಿತ' ಬಯಸುತ್ತಾರೆ. ಆದರೆ, 'ಲೋಕಮರ್ಯಾದೆ'ಗೆ ಅಂಜುತ್ತಾರೆ. 'ಲೋಕಹಿತ' ಬಯಸುವ 'ಅಧಿಕಾರಿ' ಹೇಗಿರಬೇಕು? ಅವನು ಸಂಪನ್ನಭಾವದಿಂದಲೂ ಸಮಗ್ರ ದೃಷ್ಟಿಯಿಂದಲೂ ಕೂಡಿರಬೇಕು. ಸಹನೆ, ತಾಳ್ಮೆ, ಪ್ರಾಮಾಣಿಕತೆ, ಧರ್ಮಭೀರು ಆಗಿರಬೇಕು. ಇಂಥವನು 'ಅಲ್ಪದೃಷ್ಟಿ'ಯಿಂದ ಏನನ್ನೂ ಯೋಚಿಸುವುದಿಲ್ಲ. ಅವನು ಸದಾ ದೂರದೃಷ್ಟಿಯನ್ನೇ ಹೊಂದಿರುತ್ತಾನೆ. ನಮ್ಮ ಸಂಸ್ಥಾನವನ್ನು ಆಳಿದ ನಾಲ್ವಡಿಕೃಷ್ಣದೇವರಾಯ ದೂರದೃಷ್ಟಿಗೆ ಹೇಳಿ ಮಾಡಿಸಿದವರು. ಸರ್.ಎಂ. ವಿಶ್ವೇಶ್ವರಯ್ಯ ಇದೇ ಸಾಲಿನಲ್ಲಿ ಬರುವ ಪುಣ್ಯವಂತರು. ವಿಶಾಲಕರ್ನಾಟಕ ಆಗದ ಪೂರ್ವದಲ್ಲಿ ಮೈಸೂರು ಸಂಸ್ಥಾನವನ್ನು ಒಡೆಯರು ಆಳುತ್ತಿದ್ದರಷ್ಟೆ. 1868ನೇ ಮಾರ್ಚ್ 27ರಂದು ಮುಮ್ಮಡಿ ಕೃಷ್ಣರಾಜ ಒಡೆಯರ್ ನಿಧನರಾದರು. ಆಗ ಮೈಸೂರು ಸಂಸ್ಥಾನ ಬ್ರಿಟಿಷರ ವಶದಲ್ಲಿತ್ತು. ಶ್ರೀಚಾಮರಾಜೇಂದ್ರ ಒಡೆಯರ್ ಇನ್ನೂ ಚಿಕ್ಕವರು. ಇವರನ್ನು ಸಂರಕ್ಷಿಸಿ, ಸಂಸ್ಥಾನವನ್ನು ಸಮಗ್ರ ದೃಷ್ಟಿಯಿಂದ ಬೆಳೆಸಿದವರು ದಿವಾನ್ ರಂಗಾಚಾರ್ಯ. ಇವರು 1868ನೆಯ ಜೂನ್ ತಿಂಗಳಿನಲ್ಲಿ ಮೈಸೂರು ಸಂಸ್ಥಾನದ ಅಧಿಕಾರವನ್ನು ವಹಿಸಿಕೊಂಡರು. ಮೈಸೂರು ಸಂಸ್ಥಾನದ ಕಾರ್ಯಭಾರ ವಹಿಸಿಕೊಳ್ಳುವಾಗ ಸಂಸ್ಥಾನವು ಅರಾಜಕ ಸ್ಥಿತಿಗೆ ಬಂದಿತ್ತು. ಆರ್ಥಿಕ ಸ್ಥಿತಿಯಂತೂ ಅಧೋಗತಿಗೆ ಇಳಿದಿತ್ತು; ಸ್ವೇಚ್ಛಾಚಾರ ಮನೆಮಾಡಿಕೊಂಡಿತ್ತು. ಸಾಮಾನ್ಯಜನ ದಿಕ್ಕೆಟ್ಟು ಕುಳಿತಿದ್ದರು. ಇಂಥ 'ಅವಸರ್ಪಿಣಿ' ಕಾಲದಲ್ಲಿ ಮೈಸೂರಿನ ಏಳಿಗೆಗೆ ಕಟಿಬದ್ಧರಾದವರು ಶ್ರೀರಂಗಾಚಾರ್ಯ(1831–1883). ಇವರು ಗುಣಾಭಿಮಾನಿಗಳಾಗಿದ್ದರೇ; ಹೊರತು ಜಾತ್ಯಭಿಮಾನಿ, ಮತಾಭಿಮಾನಿಗಳು ಆಗಿರಲಿಲ್ಲ.

ದಿವಾನ್ ರಂಗಾಚಾರ್ಯರು ಮೈಸೂರು ಸಂಸ್ಥಾನದ ಏಳಿಗೆಗಾಗಿ ಪರಿಶ್ರಮಿಸಿದರಷ್ಟೆ. ಅವರು ಸಮಗ್ರವಾದ ದೂರದೃಷ್ಟಿಯನ್ನು ಹೊಂದಿದ್ದರು. ಶ್ರೀಚಾಮರಾಜೇಂದ್ರ ಒಡೆಯರ್ ಅವರಿಗೆ ಹದಿನೆಂಟು ವರ್ಷ ತುಂಬಿದಾಗ 1881ರ ಮಾರ್ಚ್ 25ರಂದು ಸಂಸ್ಥಾನದ ರಾಜ್ಯಭಾರವನ್ನು ವಹಿಸಿಕೊಂಡರು. ಆ ದಿನವೇ ರಂಗಾಚಾರ್ಯರನ್ನು ದಿವಾನ್ ಪದವಿಗೆ ರಾಜರು ನೇಮಿಸಿಕೊಂಡರು. ಇವರು ಆಡಳಿತದಲ್ಲಿ ಹಲವಾರು ತಿದ್ದುಪಡಿಗಳನ್ನು ತಂದರು. ಕೃಷಿ ಮತ್ತು ವಾಣಿಜ್ಯ ಅಭಿವೃದ್ಧಿಗೆ ಆದ್ಯತೆಯನ್ನು ನೀಡಿದರು. ಬೆಂಗಳೂರು ಮೈಸೂರಿಗೆ ರೈಲು ದಾರಿಗಳ ಯೋಜನೆಗೆ ಅಡಿಪಾಯ ಹಾಕಿದರು. ಅವರು ದಿವಾನರಾಗಿದ್ದಾಗ 'ಪ್ರಜಾಪ್ರತಿನಿಧಿ ಸಭೆ'ಯನ್ನು ರೂಪಿಸಿದರು. ಆ ಕಾಲಕ್ಕೆ ಇಂಡಿಯಾ ದೇಶದಲ್ಲಿ ಯಾವ ಸಂಸ್ಥಾನದಲ್ಲೂ ಇಂಥದೊಂದು 'ಸಮಿತಿ'ಯು ಇರಲಿಲ್ಲ. ಇದು ದಿವಾನ್ ರಂಗಾಚಾರ್ಯ ಅವರ 'ದೂರದೃಷ್ಟಿ'ಯ ಫಲವಾಗಿತ್ತು. ಅವರು 'ಪ್ರಜೆಗಳನ್ನು ತುಳಿದುಹಾಕುತ್ತಿರುವ ಅಧಿಕಾರಿ ವರ್ಗದ ಅಧೀನದಿಂದ ಬಿಡುಗಡೆ ಮಾಡಿಸಿ, ಅವರು ಕೃಷಿ ವಾಣಿಜ್ಯಗಳಲ್ಲಿ ಮುಂದುವರಿಯುವಂತೆ ಮಾಡುವುದು ಹೇಗೆ?' ಎಂಬುದರ ಹಿನ್ನೆಲೆಯಲ್ಲಿ 'ಪ್ರಜಾಪ್ರತಿನಿಧಿ' ಸಭೆಯನ್ನು ಅಸ್ತಿತ್ವಕ್ಕೆ ತಂದರು. ಆ ಕಾಲಕ್ಕೆ ಪ್ರಜಾಪ್ರತಿನಿಧಿ ಸಭೆಯನ್ನು ಅಸ್ತಿತ್ವಕ್ಕೆ ತರುವುದು ಸುಲಭದ ಕಾರ್ಯವಾಗಿರಲಿಲ್ಲ. ಅನೇಕರು ಇದಕ್ಕೆ ಅಡ್ಡಗಾಲು ಹಾಕುತ್ತಿದ್ದರು. 'ಈ ದೇಶದ ಜನರು ಪ್ರಜಾಪ್ರತಿನಿಧಿ ಪ್ರಭುತ್ವಕ್ಕೆ ಅರ್ಹರಾಗಿಲ್ಲವೆಂದು ಅಲ್ಲಗೆಳೆಯುತ್ತಿದ್ದರು' ಆದರೆ, ರಂಗಾಚಾರ್ಯರು ಇವನ್ನೆಲ್ಲಾ ಲೆಕ್ಕಿಸದೆ ತಮ್ಮ ಸಂಕಲ್ಪವನ್ನು ಪೂರ್ತಿಗೊಳಿಸಿದರು. ಇದು ಮುಂದೆ ಪ್ರಜಾತಂತ್ರ ವ್ಯವಸ್ಥೆಗೆ ದಾರಿದೀಪವಾಯಿತು.

ದಿವಾನ್ ರಂಗಾಚಾರ್ಯರು ಅವರು ಆ ಕಾಲಕ್ಕೆ 'ಯಾವ ಸಮಾಜದಲ್ಲಿ ಪ್ರೌಢವಿದ್ಯಾವಂತರು ಪ್ರಬಲಿಸುವುದಿಲ್ಲವೋ ಆ ಸಮಾಜವು ಏಳಿಗೆ ಹೊಂದಲಾರದು. ಈ ಪ್ರೌಢ ಪಾಠಶಾಲೆಗಳಿಗೆ ಎಲ್ಲಾ ತರಗತಿಯ ಜನರೂ ಬಂದು ಸೇರಿ ಯಥಾಯೋಗ್ಯವಾದ ವಿದ್ಯಾರ್ಥಿವೇತನಗಳ ಮೂಲಕ ಬುದ್ಧಿಶಾಲಿಗಳಾದ ಬಡಹುಡುಗರೂ ಆ ಪಾಠಶಾಲೆಗಳನ್ನು ಪ್ರವೇಶಿಸುವಂತಾದರೆ ಆ ಪಾಠಶಾಲೆಗಳಿಂದ ಒಬ್ಬಿಬ್ಬರಿಗೆ ಮಾತ್ರವಲ್ಲದೆ, ದೇಶಕ್ಕೆಲ್ಲಾ ಪ್ರಯೋಜನವುಂಟು'— ಇದು ರಂಗಾಚಾರ್ಯರು ಇಟ್ಟುಕೊಂಡಿದ್ದ ದೂರದೃಷ್ಟಿ. ಈ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನಕ್ಕೆ ಮಾತ್ರವಲ್ಲ; ದೇಶಕ್ಕೆ ಕೀರ್ತಿತಂದ ಸರ್.ಎಂ. ವಿಶ್ವೇಶ್ವರಯ್ಯ ಅವರು ಇವರಿಂದ ಪ್ರೋತ್ಸಾಹಿತರಾದವರು. ಇವರಲ್ಲದೆ ಅನೇಕರನ್ನು ಮದರಾಸು, ಪೂನಾ, ಮೊದಲಾದ ಕಡೆ ಕಳಿಸಿ ವೈದ್ಯ, ಎಂಜಿನಿಯರಿಂಗ್, ವಿಜ್ಞಾನಗಳಲ್ಲಿ ಪರಿಣತಿ ಪಡೆದು ಬರುವಂತೆ ವ್ಯವಸ್ಥೆ ಮಾಡಿದರು. ದೂರದೃಷ್ಟಿ ಉಳ್ಳ ಮನುಷ್ಯ ದೇಶಕ್ಕೆ ಒಳಿತನ್ನು ಬಯಸುತ್ತಾನೆ. ದೇಶವು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಾಗ ಅವನು ಉಪಾಯಾಂತರಗಳಿಂದ ದೇಶವನ್ನು ರಕ್ಷಿಸುತ್ತಾನೆ. ದೇಶವು ಸಬಲಗೊಳ್ಳಲು ನಾನಾ ಉಪಾಯಗಳನ್ನು ಸಮಗ್ರ ಯೋಜನೆಗಳನ್ನೂ ಕೈಗೊಳ್ಳುತ್ತಾನೆ. ದಿವಾನ್ ರಂಗಾಚಾರ್ಯ ಮೈಸೂರು ಸಂಸ್ಥಾನವನ್ನು ಕೆಲವೇ ವರ್ಷಗಳಲ್ಲಿ ಅಭಿವೃದ್ಧಿಪಥಕ್ಕೆ ತಂದರು. ದುರ್ದೈವವೆಂದರೆ ಅಂಥವರ ಸಂಖ್ಯೆ ಬೆರಳಲ್ಲಿ ಎಣಿಸುವಷ್ಟು ಇಲ್ಲವಲ್ಲ ಎಂದು ಕಳವಳಪಡುವ ಪರಿಸ್ಥಿತಿಯಲ್ಲಿ ನಾವಿದ್ದೇವೆ. ದೂರಂ ಪಶ್ಯತ ಮಾಹ್ರಸ್ವಂ, ದೂರದೃಷ್ಟಿ ಇರಲಿ; ಅಲ್ಪದೃಷ್ಟಿಬೇಡ.

■ ಪುರಂಜೀವಿ

ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
CLINICALLY PROVED


◆ ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.